(೬) ಉಳ್ಳಾಲದಲ್ಲಿರುವ ಗೇರುಬೀಜ ಸಂಶೋಧನ ಕೇಂದ್ರದ ಡಾ॥ ಖಾನ್ ಅವರನ್ನು ವರ್ಗಾಯಿಸಿರುವುದು

ಶ್ರೀ ಬಿ.ಎಂ. ಇದಿನಬ್ಬ.—ದಕ್ಷಿಣ ಕನ್ನಡ ಉಳ್ಳಾಲದಲ್ಲಿ ವಿಷಯಾಧಾರಿತ ಪ್ರಥಮವಾದ ಗೇರು ಬೀಜ ಸಂಶೋಧನಾ ಕೇಂದ್ರ ೧೯೫೩ರಲ್ಲಿ ಪ್ರಾರಂಭವಾಗಿ ಕೆಲಸ ಮಾಡುತ್ತಿದೆ. ಆದರೆ ೧೯೮೪ರಪರೆಗೂ ಅಲ್ಲಿಂದಲ್ಲಿಗೆ ಕೆಲಸ ಮಾಡುತ್ತಾ ಇದ್ದ ಈ ಕೇಂದ್ರಕ್ಕೆ ೧೯೮೪ರಲ್ಲಿ ಮುಖ್ಯಾಧಿಕಾರಿಗಳಾಗಿ ಡಾ॥ ಖಾನ್ ಎಂಬವರು ಬಂದಮೇಲೆ ವಿಶೇಷ ರೀತಿಯ ಕೆಲಸಗಳಿಂದ ರಾಜ್ಯದಲ್ಲಿ, ಈ ದೇಶದಲ್ಲಿಯೇ ಒಂದು ಅಭಿವೃದ್ಧಿಯ ಆಸೆ ಹುಟ್ಟಿಸಿತು. ಹಳೇ ಗೇರು ಮರಗಳಿಗೆ ಕಸಿ ಕಟ್ಟಿ ಹೆಚ್ಚಿಚ್ಚು ಫಸಲು ಬರುವಂತಹ ಪ್ರಗತಿಯ ಕೆಲಸವನ್ನು ಅವರು ಮಾಡಿದರು. ಇಡೀ ಜಿಲ್ಲೆಯಲ್ಲಿ ಎರಡು ವರ್ಷಗಳಲ್ಲಿ ಕೆಲಸ ನಡೆಯಿತು. ತದಬೇತಿ ಶಿಬಿರವನ್ನು ಮಾಡಿ ರೈತರಿಗೆ ವಿವರಿಸಿದರು. ಹಳೇ ಗೇರು ಮರದಲ್ಲಿ ಒಂದೆರಡು ಕಿಲೋ ಗೇರುಬೀಜ ಉತ್ಪನ್ನವಾಗುತ್ತಿದ್ದುದು ಡಾಕ್ಟರ್ ಖಾನ್‌ರ ಶ್ರಮದಿಂದ ಮರ ಪೊಂದರಲ್ಲಿ ಆರೇಳು ಕಿಲೋ ಗೇರು ಬೀಜ ಉತ್ಪನ್ನಕ್ಕೆ ಆಸ್ಪದವಾಯಿತು. ಭಾರೀ ಮುತವರ್ಜಿಯಿಂದ ಈ ಸಂಶೋಧನಾ ಕೇಂದ್ರವನ್ನು ಅಭಿವೃದ್ಧಿಗೆ ತರುತ್ತಿರುವಾಗಲೇ ಎರಡು ವರ್ಷದಲ್ಲೆ ವರ್ಷದ ಮಧ್ಯದಲ್ಲಿ ಕಳೆದ ಡಿಸೆಂಬರ್‌ನಲ್ಲಿ ಡಾಕ್ಟರ್ ಖಾನ್‌ರನ್ನು ಮೂಡಿಗೆರೆಗೆ ವರ್ಗಾವಣೆ ಮಾಡಲಾಗಿದೆ. ಇಂತಹ ಪ್ರಗತಿ ಸಾಧಿಸಿದ ಅಧಿಕಾರಿಯನ್ನು ಮೂರು ವರ್ಷ ತುಂಬುವ ಮೊದಲೇ ವರ್ಗಾಯಿಸಿದ್ದು ಆಶ್ಚರ್ಯ. ಮಾರ್ಚಿ ಅಗುವವರೆಗೂ ತಡೆಯದೆ ವರ್ಷದ ಮಧ್ಯದಲ್ಲಿ ವರ್ಗಾವಣೆ ಮಾಡಿದ್ದರಿಂದ ಉಳ್ಳಾಲ ಗೇರು ಬೀಜ ಸಂಶೋಧನಾ ಕೇಂದ್ರದ ಪ್ರಗತಿಗೆ ತುಂಬಾ ಆತಂಕವಾಗಿರುತ್ತದೆ. ಈ ಕುರಿತು ವಿಚಾರವನ್ನು ತಿಳಿಯಲು ನಾನು ಮಾನ್ಯ ಕೃಷಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಮಾನ್ಯ ಅಧ್ಯಕ್ಷರೇ, ಡಾ॥ ಎಂ. ಎ. ಖಾನ್‌ರವರು ಉಲ್ಲಾಳದ ಕೃಷಿ ಸಂಶೋಧನಾ ಕೇಂದ್ರದಲ್ಲಿ ಮುಖ್ಯಾಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದರು ಇವರು ಗೇರು ಬೀಜ ಉತ್ಪನ್ನವನ್ನು ಹೆಚ್ಚಿಸಲು ಮಾಡಿದ ಸಂಶೋಧನೆಯು ಒಂದು ಗುಣ ಮಟ್ಟಕ್ಕೆ ಬಂದಿದ್ದು, ಅದನ್ನು ವಿಸ್ತರಣೆ ಮಾಡಲು ಕರ್ನಾಟಕ ಸರ್ಕಾರದ ತೋಟಗಾರಿಕೆ ಇಲಾಖೆಯು ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತಿದೆ.

ಡಾ॥ ಎಂ. ಎಂ. ಖಾನ್‌ರವರು ಒಬ್ಬ ಉತ್ತಮ ಅಧಿಕಾರಿಗಳಾಗಿದ್ದು, ಅವರ ಕಾರ್ಯ ನಿರತೆ ಮತ್ತು ನಿಷ್ಠಾವಂತತೆಯನ್ನು ಗಮನದಲ್ಲಿಟ್ಟುಕೊಂಡು ಮತ್ತು ಉಲ್ಲಾಳ ಕೃಷಿ ಸಂಶೋಧನಾ ಕೇಂದ್ರವು ಒಂದು ಗುಣ ಮಟ್ಟಕ್ಕೆ ಬಂದಿದ್ದರಿಂದಲೂ, ಕೃಷಿ ವಿಶ್ವವಿದ್ಯಾನಿಲಯವು ಅವರನ್ನು ಮೂಡಿಗೆರೆ ಅಲ್ಲಿಯ ಅವಶ್ಯಕತೆಯನ್ನು ಗಮನಿಸಿ, ವರ್ಗಾವಣೆ ಮಾಡಿದೆ.

ಮೂಡಿಗೆರೆ ಸಂಶೋಧನಾ ಕೇಂದ್ರದಲ್ಲಿ ಏಲಕ್ಕಿ, ಕಾಫಿ, ಸಾಂಬಾರು ಪದಾರ್ಥಗಳು ಮತ್ತು ನಿಂಬೆಹಣ್ಣು ಮುಂತಾದವುಗಳು ಮೇಲೆ ಸಂಶೋಧನಾ ಕಾರ್ಯಗಳು ನಡೆಯುತ್ತಿವೆ. ಇಷ್ಟಲ್ಲದೆ, ಮೂಡಿಗೆರೆ ಸಂಶೋಧನಾ ಕೇಂದ್ರದ ಚಟುವಟಿಕೆಗಳನ್ನು ಹೆಚ್ಚಿಸಲು ಈಗಾಗಲೇ ಹೆಚ್ಚಿನ ಜಮೀನನ್ನು ಸಹ ಸ್ವಾಧೀನಪಡಿಸಿಕೊಳ್ಳಲಾಗಿದೆ. ಮೂಡಿಗೆರೆ ಸಂಶೋಧನಾ ಕೇಂದ್ರವು ಒಂದು ಪ್ರಾದೇಶಿಕ ಸಂಶೋಧನಾ ಕೇಂದ್ರವಾಗಿದ್ದು ಅಲ್ಲಿಯ ಸಂಶೋಧನಾ ಕಾರ್ಯವನ್ನು ಮತ್ತು ಇತರ ಚಟುವಟಿಕೆಗಳನ್ನು ಉತ್ತಮ ರೀತಿಯಲ್ಲಿ ನೇರವೇರಿಸಿಕೊಂಡು ಹೋಗುವುದಕ್ಕೆ ಅವಕಾಶವಾಗಲು ಒಬ್ಬ ದಕ್ಷ ಅಧಿಕಾರಿಗಳ ಅವಶ್ಯಕತೆಯಿದೆ.

ಡಾ॥ ಎಂ. ಎಂ. ಖಾನ್‌ರವರ ಜಾಗದಲ್ಲಿ ಡಾ॥ ಹೆಚ್.ಟಿ. ಪಟ್ಟಣಶೆಟ್ಟಿಯವರನ್ನು ವರ್ಗಾವಣೆ ಮಾಡಿ ನೇಮಿಸಲಾಗಿದೆ. ಡಾ॥ ಪಟ್ಟಣಶೆಟ್ಟಿಯವರು ಕೃಷಿ ವಿಶ್ವವಿದ್ಯಾನಿಲಯದ ಅತ್ಯಂತ ಹಿರಿಯ ವಿಜ್ಞಾನಿಯಾಗಿರುತ್ತಾರೆ. ಮತ್ತು ತೋಟಗಾರಿಕೆ ವಿಷಯದಲ್ಲಿ ಬಹಳ ಅನುಭವ ಹೊಂದಿರುತ್ತಾರೆ. ಕೃಷಿ ವಿಸ್ತರಣಾ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಾಧನೆಯನ್ನು ಮಾಡಿರುತ್ತಾರೆ. ಅವರು ಉಲ್ಲಾಳದ ಕೃಷಿ ಸಂಶೋಧನಾ ಕೇಂದ್ರದ ಚಟುವಟಿಕೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಉತ್ತಮ ರೀತಿಯಲ್ಲಿ ನಡೆಸಿಕೊಂಡು ಹೋಗಬಲ್ಲವರಾಗಿದ್ದಾರೆ.

(೭) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಂಡ್ಯೋ ಮನೆಗಳನ್ನು ಪುನರೂರು ಮಾಡುವುದು

ಶ್ರೀ ವಸಂತ ವಿ. ಸಾಲಿಯಾನ (ಕಾಪು).—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯು ಅತೀ ಹಿಂದುಳಿದ ಪ್ರದೇಶಗಳಿಂದ ಕೂಡಿದ ಒಂದು ಜಿಲ್ಲೆಯಾಗಿರುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಈಗಲೂ ಸಹ ಸಣ್ಣ ಸಣ್ಣ ಮುಳಿ ಹುಲ್ಲಿನ ಸಾವಿರಾರು ಮನೆಗಳು ಇದ್ದಂತಹ ಒಂದು ಜಿಲ್ಲೆ.